**ಎಲ್.ಎ.ಸಿ ನಂ. 3/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 1.2.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಮಾನ್ಯ ಎ.ಜಿ.ಪಿ ರವರಿಂದಃ**

ನಾನು ಎದುರುದಾರರ ಕಛೇರಿಯಿಂದ ಭೂಸ್ವಾಧೀನಗೊಂಡಿರುವ ಬಗ್ಗೆ ಪರಿಹಾರ ಪಡೆದು 20 ವರ್ಷವಾಗಿರುತ್ತದೆ. ಚಕ್ಕೋಡನಹಳ್ಳಿ ಗ್ರಾಮದ ಸರ್ವೆ ನಂ.42ರ 14 ವರೆ ಗುಂಟೆ ಜಮೀನು ಭೂಸ್ವಾಧೀನವಾಗಿರುತ್ತದೆ. ಎದುರುದಾರರ ಕಛೇರಿಯಿಂದ ಪರಿಹಾರ ಹಣವನ್ನು ಪಡೆದುಕೊಳ್ಳಲು ನಮೂನೆ-12(2) ನ್ನು 20 ವರ್ಷಗಳ ಹಿಂದೆ ಪಡೆದಿರುತ್ತೇನೆ. ಭೂಸ್ವಾಧೀನವಾಗಿ ಉಳಿದಿರುವ ಆಸ್ತಿಯು ಇಂಡೀಕರಣವಾಗಿರುವ ಬಗ್ಗೆ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಓದಲು ಬಾರದ ಕಾರಣ ಗೊತ್ತಿರುವುದಿಲ್ಲ ಎನ್ನುವರು. ನಿಗದಿತ ಅವಧಿಯೊಳಗೆ ಹೆಚ್ಚಿನ ಪರಿಹಾರ ಸಿಗಬೇಕೆಂದು ಅರ್ಜಿ ಸಲ್ಲಿಸಲು ತೊಂದರೆ ಇರುವುದಿಲ್ಲ. ಭೂಸ್ವಾಧೀನವಾಗಿರುವ ಜಮೀನಿನಲ್ಲಿ ಬೆಳೆ ಬೆಳೆಯಲು ನೀರಿನ ವ್ಯವಸ್ಥೆಗಾಗಿ ಬೋರ್ವೆಲ್ ಇರಲಿಲ್ಲ. ಸಾಕ್ಷಿದಾರರು ಮುಂದುವರೆದು ಕೆರೆಯ ನೀರನ್ನು ಉಪಯೋಗಿಸುತ್ತಿದ್ದೆವು ಎನ್ನುವರು. ಹತ್ತಿ, ಟೊಮಟೋ ಮತ್ತು ಬೀನ್ಸ ಬೆಳೆಯಲು ನೀರಾವರಿ ಸೌಲಭ್ಯ ಬೇಕು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 1 ಎಕರೆಯಲ್ಲಿ ವರ್ಷಕ್ಕೆ 1 ಲಕ್ಷ ಆದಾಯ ಪಡೆಯುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಿಪಿ3 ರಲ್ಲಿ ಹೇಳಿರುವ ಆಸ್ತಿಯು ಸರ್ವೆ ನಂ. 42 ರಲ್ಲಿ ಇರುತ್ತದೆ. ಸದರಿ ಆಸ್ತಿಯ ಮಾಲೀಕರ ಹೆಸರು ಜವರೇಗೌಡ ಆಗಿದ್ದು ಅವರು ನಮ್ಮ ಜಮೀನಿನ ಪಕ್ಕದಲ್ಲಿರುತ್ತಾರೆ. ಈಗಾಗಲೇ ಎದುರುದಾರರು ಮಾರುಕಟ್ಟೆ ಮೌಲ್ಯಕ್ಕೆ ಅನುಗುಣವಾಗಿ ಪರಿಹಾರ ನೀಡಿದ್ದು ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ನಿಗದಿತ ಸಮಯದಲ್ಲಿ ಹೆಚ್ಚಿನ ಪರಿಹಾರ ಕೋರಿ ಅರ್ಜಿ ಸಲ್ಲಿಸದಿರುವುದರಿಂದ ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ಕಾಲ ವಿಳಂಬವಾಗಿ ಅರ್ಜಿ ಸಲ್ಲಿಸಿರುವ ವಿಚಾರ ಗೊತ್ತಿದ್ದರೂ ಸಹ ಸರ್ಕಾರದಿಂದ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.